# ನಿಲ್ಲದ ಬೇಳೆ ಬವಣೆ, ಟೊಮೆಟೊ ಬೆಲೆ ಗಗನಕ್ಕೆ

**ಬೆಂಗಳೂರು:** ಒಂದು ಕಡೆ ಟೊಮೆಟೊ ಬೆಲೆ ಗಗನಕ್ಕೆ, ಮತ್ತೊಂದೆಡೆ ನಿಯಂತ್ರಣಕ್ಕೆ ನಿಲುಕದ ಬೇಳೆಗಳ ಧಾರಣೆ... ಈ ದರ ಅಬ್ಬರದ ನಡುವೆ ಜನಸಾಮಾನ್ಯರು ತತ್ತರಿಸಿದ್ದಾರೆ. ಕೇಂದ್ರ ಸರಕಾರವು ಅಗತ್ಯ ಪ್ರಮಾಣದಷ್ಟು ಧಾನ್ಯಗಳನ್ನು ಸಮರ್ಪಕವಾಗಿ ಆಮದು ಮಾಡಿಕೊಂಡು ಜನರಿಗೆ ತಲುಪಿಸುತ್ತಿಲ್ಲ, ರಾಜ್ಯ ಸರಕಾರವು ಕಾಳಸಂತೆಕೋರರಿಗೆ ಲಗಾಮು ಹಾಕುತ್ತಿಲ್ಲ ಎಂಬ ಆಕ್ರೋಶ ಸಾರ್ವಜನಿಕ ವಲಯದಲ್ಲಿ ಕೇಳಿ ಬರುತ್ತಿದೆ.

ಉತ್ಪಾದನೆ ಹಾಗೂ ಬೇಡಿಕೆ ಪ್ರಮಾಣದಲ್ಲಿ ಭಾರಿ ವ್ಯತ್ಯಾಸ ಇರುವುದರಿಂದ ಸದ್ಯಕ್ಕೆ ಬೆಲೆ ನಿಯಂತ್ರಿಸುವುದು ಸರಕಾರಗಳಿಗೂ ಸವಾಲಾಗಿ ಪರಿಣಮಿಸಿದೆ. ದೇಶದಲ್ಲಿ 1.70 ಕೋಟಿ ಟನ್ ಬೇಳೆಕಾಳು ಉತ್ಪಾದನೆಯಾದರೆ, ಬೇಡಿಕೆ ಪ್ರಮಾಣ 2.35 ಕೋಟಿ ಟನ್‌ಗಳಷ್ಟಿದೆ. ಮುಂಗಾರು ಹಂಗಾಮಿನಲ್ಲಿ ಬೆಳೆಯುವ ಬೇಳೆಕಾಳು ಮಾರುಕಟ್ಟೆ ಪ್ರವೇಶಿಸುವವರೆಗೆ (ಅಕ್ಟೋಬರ್) ಏರಿದ ದರ ಯಥಾಸ್ಥಿತಿಯಲ್ಲಿ ಮುಂದುವರಿಯುವ ಸಾಧ್ಯತೆ ಇದೆ.

ಇನ್ನು, ಮೂರರಿಂದ ಮೂರೂವರೆ ತಿಂಗಳಲ್ಲಿ ಬೆಳೆಯುವ ಅಲ್ಪಾವಧಿಯ ಅಲಸಂದೆ, ಹೆಸರು ಕಾಳು ಮಾರುಕಟ್ಟೆ ಪ್ರವೇಶಿಸಿದರೆ ಅದು ಇತರ ಬೇಳೆ ಕಾಳುಗಳ ಬೆಲೆ ನಿಯಂತ್ರಣಕ್ಕೆ ಸ್ವಲ್ಪ ಸಹಕಾರಿಯಾಗಬಹುದು ಎನ್ನುವುದು ರೈತರು ಹಾಗೂ ಗ್ರಾಹಕರ ಲೆಕ್ಕಾಚಾರವಾಗಿದೆ. ಆದರೆ ಉದ್ದು, ತೊಗರಿ ಬೇಳೆ ಮಾರುಕಟ್ಟೆ ಪ್ರವೇಶಿಸಲು ಚಳಿಗಾಲ ಪ್ರಾರಂಭವಾಗುವವರೆಗೆ ಕಾಯಬೇಕಾಗುತ್ತದೆ.

ಕಳೆದ ಅಕ್ಟೋಬರ್, ನವೆಂಬರ್, ಡಿಸೆಂಬರ್ ಅವಧಿಯಲ್ಲೇ ತೊಗರಿ ಬೇಳೆ ಬೆಲೆ ಸುಮಾರು 200 ರೂ.ಗಳ ಗಡಿ ದಾಟಿತ್ತು. ಆಗಲೇ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಎಚ್ಚೆತ್ತುಕೊಂಡು ಹೆಚ್ಚಿನ ಪ್ರಮಾಣದಲ್ಲಿ ದಾಸ್ತಾನು ಮಾಡಿದ್ದರೆ ಈಗ ಸ್ವಲ್ಪ ಬೆಲೆ ನಿಯಂತ್ರಿಸಬಹುದಿತ್ತು. ಆದರೆ, ಪರಿಸ್ಥಿತಿ ಮಿತಿ ಮೀರಿದ ಮೇಲೆ ಸರಕಾರ ಬೆಲೆ ನಿಯಂತ್ರಣಕ್ಕೆ ಮುಂದಾಗಿರುವುದು ಅದರ ವೈಫಲ್ಯತೆಯನ್ನು ಎತ್ತಿ ತೋರಿಸುತ್ತದೆ.

**ದಾಸ್ತಾನಿಗೆ ಸಿಗುತ್ತಿಲ್ಲ ತೊಗರಿ, ಉದ್ದು ಬೇಳೆ**

ರಾಜ್ಯದಲ್ಲಿ ಕೂಡ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ತೊಗರಿ, ಉದ್ದು ಬೇಳೆ ದಾಸ್ತಾನಿಗೆ ಪ್ರಯತ್ನ ನಡೆಸಿದರೂ ಖರೀದಿಗೆ ಬೇಳೆಯೇ ಸಿಗುತ್ತಿಲ್ಲ. 'ತೊಗರಿ ಕಣಜ' ಕಲಬುರಗಿಯಲ್ಲೇ ಈ ಬಾರಿ ತೊಗರಿ ಬೇಳೆ ಕೈಗೆ ಸಿಗಲಿಲ್ಲ. ಅಲ್ಪಸ್ವಲ್ಪ ಇಳುವರಿ ಬಂದರೂ ಬೇಡಿಕೆ ಪ್ರಮಾಣ ಹೆಚ್ಚಿದ್ದರಿಂದ ಬೆಲೆ ನಿಯಂತ್ರಣಕ್ಕೆ ಬರಲು ಸಾಧ್ಯವಾಗಲಿಲ್ಲ.

ಇನ್ನು, ಸಾರ್ವಜನಿಕ ವಿತರಣಾ ಪದ್ಧತಿಯಡಿ 1.08 ಕೋಟಿ ಬಿಪಿಎಲ್ ಕುಟುಂಬಗಳಿಗೆ ಕನಿಷ್ಠ ಒಂದು ಕೆ.ಜಿ ತೊಗರಿ ಬೇಳೆ

ನೀಡಬೇಕೆಂದರೂ 10,500 ಮೆಟ್ರಿಕ್ ಟನ್ (1 ಲಕ್ಷ ಕ್ವಿಂಟಾಲ್‌ಗೂ ಹೆಚ್ಚು) ಅಗತ್ಯವಿದೆ. ಆದರೆ, ಪ್ರಸ್ತುತ 2000 ಮೆಟ್ರಿಕ್ ಟನ್‌ನಷ್ಟು ಕೂಡ ಲಭ್ಯವಾಗುತ್ತಿಲ್ಲ. ಇದರಿಂದ ತೊಗರಿ ದಾಸ್ತಾನಿಗೆ ಅಡ್ಡಿಯಾಗಿ ಪರಿಣಮಿಸಿದೆ.

ಈ ನಡುವೆ, ನಾಲ್ಕೈದು ತಿಂಗಳ ಹಿಂದೆ ಕನಿಷ್ಠ ಬೆಂಬಲ ಬೆಲೆಯಡಿ ಬೇಳೆಕಾಳುಗಳನ್ನು ಪೂರೈಸುವುದಾಗಿ ಕೇಂದ್ರ ಸರಕಾರ ಭರವಸೆ ನೀಡಿತ್ತು. ರಾಜ್ಯ ಸರಕಾರಗಳು ಕಾಳು ಖರೀದಿಸಿ ಅವುಗಳನ್ನು ಮಿಲ್‌ಗಳಲ್ಲಿ ಬೇಳೆಯನ್ನಾಗಿ ಪರಿವರ್ತಿಸುವ ಮೂಲಕ 120 ರೂ. ದರದಲ್ಲಿ ಗ್ರಾಹಕರಿಗೆ ಮಾರಾಟ ಮಾಡುವಂತೆ ಸೂಚನೆ ನೀಡಿತ್ತು. ಆದರೆ, ಕಲಬುರಗಿ, ಬೀದರ್ ಭಾಗದಲ್ಲಿ ಬೇಳೆಕಾಳುಗಳನ್ನು ಖರೀದಿಸಿ ಮಿಲ್ ಮಾಡಿಸಿ ಬೇರೆ ಕಡೆ ಸಾಗಿಸುವುದು ಕಷ್ಟ. ಇದರಿಂದ ಇಲಾಖೆಯೇ 150 ರೂ. ದರದಲ್ಲಿ ತೊಗರಿ ಬೇಳೆ ಮಾರಾಟ ಮಾಡಬೇಕಾಗುತ್ತದೆ. ಪ್ರಸ್ತುತ ಉತ್ಕೃಷ್ಟ ಗುಣಮಟ್ಟದ 'ಶಿವಲಿಂಗ' ತೊಗರಿ ಬೇಳೆ ಬೆಲೆಯೇ ಬೆಂಗಳೂರಿನ ಮಾರುಕಟ್ಟೆಯಲ್ಲಿ ಕೆ.ಜಿ.ಗೆ 145 ರೂ.ಗಳಷ್ಟಿದೆ. ಹೀಗಾಗಿ, ಸರಕಾರ ರೈತರಿಂದ ತೊಗರಿ ಖರೀದಿಸಿ ಮಾರಾಟ ಮಾಡುವ ಗೋಜಿಗೆ ಹೋಗಿಲ್ಲ. ಈ ಸಂಬಂಧ ಆಹಾರ ಇಲಾಖೆ ಸಲ್ಲಿಸಿದ ಪ್ರಸ್ತಾವನೆ ಸಚಿವ ಸಂಪುಟದ ಉಪ ಸಮಿತಿ ಮುಂದಿದೆ. ಆದರೆ, ಬೇಡಿಕೆ ಪ್ರಮಾಣದ ತೊಗರಿ ಬೇಳೆ ಲಭ್ಯವಿಲ್ಲದ ಕಾರಣ ಸರಕಾರ ಕೂಡ ಯಾವುದೇ ತೀರ್ಮಾನ ಕೈಗೊಂಡಿಲ್ಲ ಎಂದು ಮೂಲಗಳು ತಿಳಿಸಿವೆ.

**ಮೊಬೈಲ್ ವ್ಯಾನ್ ಯಶಸ್ವಿಯಾದೀತೆ?**

ಇನ್ನು, ಮಾರುಕಟ್ಟೆಯಲ್ಲಿ ಬೆಲೆ ನಿಯಂತ್ರಿಸಲು ಕೇಂದ್ರ ಸರಕಾರ ದಕ್ಷಿಣ ಆಫ್ರಿಕಾ, ಮ್ಯಾನ್ಮಾರ್, ಬರ್ಮಾ ಮತ್ತಿತರ ದೇಶಗಳಿಂದ ಬೇಳೆ ಕಾಳುಗಳನ್ನು ಆಮದು ಮಾಡಿಕೊಳ್ಳುವುದರ ಜತೆಗೆ, ದಾಸ್ತಾನಿರುವ ಬೇಳೆ ಕಾಳುಗಳನ್ನು ಕಡಿಮೆ ದರದಲ್ಲಿ ಮೊಬೈಲ್ ವ್ಯಾನ್‌ಗಳ ಮೂಲಕ ಗ್ರಾಹಕರಿಗೆ ಮಾರಾಟ ಮಾಡಲು ಮುಂದಾಗಿದೆ. ಆದರೆ, ವಿದೇಶಗಳಿಂದ ಆಮದಾಗುವ ಕಳಪೆ ಗುಣಮಟ್ಟದ ಹಾಗೂ ಅಷ್ಟು ರುಚಿಕರ ಇಲ್ಲದ ಬೇಳೆ ಕಾಳುಗಳನ್ನು ನಮ್ಮ ಜನ ಬಳಸುವುದೇ ಕಷ್ಟ. ಹೀಗಾಗಿ, ಅದರಲ್ಲಿ ಕೇಂದ್ರ ಸರಕಾರ ಎಷ್ಟರ ಮಟ್ಟಿಗೆ ಸಫಲವಾಗಲಿದೆ ಎಂಬುದನ್ನು ಕಾದು ನೋಡಬೇಕಿದೆ.

**ಕಾಳಸಂತೆಕೋರರ ಕಾಟ**

ಕಳೆದ ವರ್ಷ ಬೇಳೆಕಾಳುಗಳ ಬೆಲೆ ಗಗನಕ್ಕೇರಿದಾಗ ಆಹಾರ ಇಲಾಖೆ ಗಿರಣಿಗಳ ಮೇಲೆ ದಾಳಿ ನಡೆಸಿ, ತೊಗರಿ ಮತ್ತಿತರ ಬೇಳೆಕಾಳುಗಳನ್ನು ಜಪ್ತಿ ಮಾಡಲಾಗಿತ್ತು. ಆದರೆ, ಈ ಸಂಬಂಧ ಗೆಜೆಟ್ ನೋಟಿಫಿಕೇಷನ್ ಹೊರಡಿಸುವ ಮುನ್ನವೇ ಇಲಾಖೆ ಬೇಳೆ ಕಾಳು ಜಪ್ತಿ ಮಾಡಲಾಗಿದೆ ಎಂದು ಆರೋಪಿಸಿ ಗಿರಣಿ ಮಾಲೀಕರು ನ್ಯಾಯಾಲಯದ ಮೆಟ್ಟಿಲೇರಿದ್ದರು. ನ್ಯಾಯಾಲಯ ಗಿರಣಿ ಮಾಲೀಕರ ಪರ ತೀರ್ಪು ನೀಡಿದ್ದರಿಂದ ಇಲಾಖೆ ಜಪ್ತಿ ಮಾಡಿದ್ದ ಬೇಳೆಕಾಳುಗಳನ್ನು ಬಿಟ್ಟುಕೊಡುವಂತಾಗಿತ್ತು. ಈ ಬಾರಿಯೂ ಕೆಲವು ವ್ಯಾಪಾರಿಗಳು ಸಾಕಷ್ಟು ಪ್ರಮಾಣದಲ್ಲಿ

ಧಾನ್ಯಗಳನ್ನು ಸಂಗ್ರಹಿಸಿ ಕೃತಕ ಅಭಾವ ಸೃಷ್ಟಿಸುತ್ತಿದ್ದಾರೆ. ಕಾಳಸಂತೆಕೋರರ ವಿರುದ್ಧ ಸರಕಾರ ಕೇವಲ ತೋರಿಕೆಯ ಕ್ರಮ ಕೈಗೊಳ್ಳುತ್ತಿದೆ ಎಂಬ ಆಪಾದನೆ ಕೇಳಿ ಬಂದಿದೆ.

**70 ಲಕ್ಷ ಟನ್ ಕೊರತೆ**

ಪೂರೈಕೆ ಹಾಗೂ ಬೇಡಿಕೆ ನಡುವೆ 70 ಲಕ್ಷ ಟನ್ ಕೊರತೆ ಕಂಡು ಬಂದಿರುವುದು ಬೇಳೆಕಾಳುಗಳ ಬೆಲೆ ಏರಿಕೆಗೆ ಮುಖ್ಯ ಕಾರಣ. ಬರಗಾಲದಿಂದ ಉತ್ಪಾದನೆ ಕೊಂಠಿತಗೊಂಡಿದ್ದರಿಂದ ಪೂರೈಕೆ ಪ್ರಮಾಣ ಕುಸಿದಿದೆ. ಪ್ರತಿ ವರ್ಷದ ಬೇಳೆಕಾಳುಗಳ ಸರಾಸರಿ ಬೇಡಿಕೆ ಸುಮಾರು 24 ದಶಲಕ್ಷ ಟನ್. ಆದರೆ, 2015-16ನೇ ಸಾಲಿನಲ್ಲಿ ಬೇಳೆಕಾಳುಗಳ ಉತ್ಪಾದನೆ 17 ದಶಲಕ್ಷ ಟನ್‌ಗಳಿಗೆ ಕುಸಿದಿದೆ. ಕಳೆದ ಒಂದು ವರ್ಷದಲ್ಲಿ 5.5 ದಶಲಕ್ಷ ಟನ್ ಬೇಳೆಕಾಳುಗಳನ್ನು ಆಮದುಮಾಡಿಕೊಂಡಿದ್ದರೂ, ಬೇಡಿಕೆ ನೀಗಿಸಲು ಸಾಧ್ಯವಾಗಿಲ್ಲ.

-----

ಪೂರ್ವ ಮುಂಗಾರಿನಿಂದ ಮೇ ತಿಂಗಳಲ್ಲಿ ಬಿತ್ತನೆ ಮಾಡಿರುವುದು ಇದೀಗ ಸ್ವಲ್ಪ ಪ್ರಮಾಣದಲ್ಲಿ ತರಕಾರಿ ಮಾರುಕಟ್ಟೆಗೆ ಬರುತ್ತಿದೆ. ಈಗ ಮುಂಗಾರು ಮಳೆ ಆರಂಭವಾಗಿದ್ದು, ಬಿತ್ತನೆ ಕಾರ್ಯಗಳು ನಡೆದಿವೆ. ಇದು ಕೊಯ್ಲಿಗೆ ಬರಲು ಕನಿಷ್ಠ 30-40 ದಿನವಾದರೂ ಬೇಕು.